# ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ –ಎಣ್ಣೆಕಾಳು ಮತ್ತು ತಾಳೆಬೆಳೆಗಳು
# (ಎನ್.ಎಫ್.ಎಸ್.ಎಂ– ಎಣ್ಣೆಕಾಳು)

# (National Food Security Mission -Oilseeds and Oilpalm)

ಹನ್ನೆರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಎಣ್ಣೆಕಾಳು ಬೆಳೆಗಳಲ್ಲಿ ಉತ್ಪಾದನೆಯನ್ನು ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವ ಉದ್ದೇಶದಿಂದ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ –ಎಣ್ಣೆಕಾಳು ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

**ಯೋಜನೆಯ ಪ್ರಮುಖ ಉದ್ದೇಶಗಳು:**

1) ಆಯ್ಕೆ ಮಾಡಿರುವ ಜಿಲ್ಲೆಗಳಲ್ಲಿ ಎಣ್ಣೆಕಾಳು ಬೆಳೆಗಳಲ್ಲಿ ಕ್ಷೇತ್ರ ವಿಸ್ತೀರ್ಣ ಹಾಗೂ ಉತ್ಪಾದಕತೆ ಹೆಚ್ಚು ಮಾಡುವ ಮುಖಾಂತರ ಹೆಚ್ಚು ಉತ್ಪಾದನೆಯನ್ನು ಸಾಧಿಸುವುದು.
2) ಕ್ಷೇತ್ರ ಮಟ್ಟದಲ್ಲಿ ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆಯನ್ನು ಸ್ಥಿರಗೊಳಿಸುವುದು.
3) ಕ್ಷೇತ್ರ ಮಟ್ಟದಲ್ಲಿ ಕೃಷಿ ಆದಾಯ ಹೆಚ್ಚಿಸುವುದರ ಮೂಲಕ ರೈತರಲ್ಲಿ ಆತ್ಮ ವಿಶ್ವಾಸವನ್ನು ಮೂಡಿಸುವುದು.

**ಕಾರ್ಯಕ್ರಮದ ಅನುಮೋದನೆ ಹಾಗೂ ಅನುಷ್ಠಾನ ಪ್ರಕ್ರಿಯೆ (Procedure for approval and Implementation):**

ಕೇಂದ್ರ ಕೃಷಿ ಮತ್ತು ಸಹಕಾರ ಇಲಾಖೆ, ಭಾರತ ಸರ್ಕಾರ ಇವರಿಂದ ಪ್ರತಿ ರಾಜ್ಯಕ್ಕೆ ತಾತ್ಕಾಲಿಕ ಕಾರ್ಯಕ್ರಮವನ್ನು ನೀಡುತ್ತಾ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವಂತೆ ತಿಳಿಸಲಾಗುತ್ತದೆ. ಕಾರ್ಯಕ್ರಮದಲ್ಲಿ ಸೂಚಿಸಲಾದ ಮಾರ್ಗಸೂಚಿಗಳನ್ನು ಹಾಗೂ ಆಯಾ ಬೆಳೆಗಳಲ್ಲಿ ಜಿಲ್ಲೆಯ ಆದ್ಯತೆ ಮತ್ತು ಸಾಮರ್ಥ್ಯತೆಯನ್ನು ಪರಿಗಣನೆಯಲ್ಲಿರಿಸಿ ಜಿಲ್ಲಾ ಮಟ್ಟದ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ –ಎಣ್ಣೆಕಾಳು ಕಾರ್ಯಕಾರಿ ಸಮಿತಿಯು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ರಾಜ್ಯ ಅಭಿಯಾನ ನಿರ್ದೇಶಕರಿಗೆ ಸಲ್ಲಿಸುವುದು.

ಜಿಲ್ಲೆಗಳ ಕ್ರಿಯಾ ಯೋಜನೆಗಳನ್ನು ಪರಿಗಣನೆಯಲ್ಲಿರಿಸಿ ಸಿದ್ಧಪಡಿಸಲಾಗುವ ರಾಜ್ಯ ಕ್ರಿಯಾ ಯೋಜನೆಗೆ ರಾಜ್ಯ ಮಟ್ಟದ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಕಾರ್ಯಕಾರಿ ಸಮಿತಿಯ ಅನುಮೋದನೆ ಪಡೆದ ನಂತರ ಕ್ರಿಯಾ ಯೋಜನೆಯನ್ನು ಕೇಂದ್ರ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ –ಎಣ್ಣೆಕಾಳು ಕಾರ್ಯಕಾರಿ ಸಮಿತಿಯ ಅನುಮೋದನೆಗಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು. ಕ್ರಿಯಾ ಯೋಜನೆಯೊಂದಿಗೆ ಹಿಂದಿನ ವರ್ಷದಲ್ಲಿ ಅನುಷ್ಠಾನಗೊಳಿಸಲಾದ ಸದರಿ ಯೋಜನೆಯ ಪ್ರಗತಿ ವಿವರ, ನೂತನ ಅವಿಷ್ಕಾರಗಳು, ಫಲಶೃತಿ, ಅನುಭವ, ಯಶೋಗಾಥೆಗಳ ವಿವರಗಳನ್ನು ಸಹ ಸಲ್ಲಿಸಲಾಗುವುದು.

ಯೋಜನೆಯಡಿ ರಾಜ್ಯಕ್ಕೆ ಹಂಚಿಕೆಯಾಗಿರುವ ಒಟ್ಟಾರೆ ಅನುದಾನದಲ್ಲಿ ಜಿಲ್ಲೆಗಳ ಸ್ಥಳೀಯ ಅವಶ್ಯಕತೆಗಳನ್ನಾಧರಿಸಿ ಶೇ.20ರಷ್ಟು ಅನುದಾನಕ್ಕೆ ಘಟಕ ಪರಿವರ್ತನೆಗೆ ಅನುಮೋದನೆ ನೀಡಲು ರಾಜ್ಯ ಮಟ್ಟದ – ಎಣ್ಣೆಕಾಳು ಅಭಿಯಾನದ ನಿರ್ದೇಶಕರಿಗೆ ಅಧಿಕಾರವಿರುತ್ತದೆ.

**ಫಲಾನುಭವಿಗಳು ಮತ್ತು ಕ್ಷೇತ್ರ ಆಯ್ಕೆಗೆ ಮಾನದಂಡಗಳು:**

–ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯ ಅನುಷ್ಠಾನ ಕುರಿತು ಭಾರತ ಸರ್ಕಾರದ ನಿರ್ಣಯದಂತೆ ಯೋಜನೆಯ ಒಟ್ಟಾರೆ ಅನುದಾನದಲ್ಲಿ ವಿಶೇಷ ಘಟಕ ಯೋಜನೆಗೆ ಶೇ.17.15 ಮತ್ತು ಗಿರಿಜನ ಉಪಯೋಜನೆಗೆ ಶೇ. 6.95 ರಷ್ಟು ಅನುದಾನವನ್ನು ಮೀಸಲಿರಿಸುವುದು. ಆಯಾ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನಸಂಖ್ಯೆಯನ್ನಾಧರಿಸಿ ಅನುದಾನವನ್ನು ನಿಗದಿಪಡಿಸುವುದು.

–ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಅನುದಾನದ ಕನಿಷ್ಠ ಶೇ. 33ರಷ್ಟನ್ನು ಮೀಸಲಿರಿಸುವುದು.

–ಮಹಿಳಾ ರೈತರಿಗೆ ಮತ್ತು ಅಲ್ಪಸಂಖ್ಯಾತರಿಗೆ ಕ್ರಮವಾಗಿ ಅನುದಾನದ ಕನಿಷ್ಠ ಶೇ. 33 ಮತ್ತು 15 ರಷ್ಟನ್ನು ಮೀಸಲಿರಿಸುವುದು.

– ಅಧ್ಯಕ್ಷರು, ಜಿಲ್ಲಾ ಮಟ್ಟದ ರಾಷ್ಟ್ರೀಯ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಎಣ್ಣೆಕಾಳು ಕಾರ್ಯಕಾರಿ ಸಮಿತಿ ಇವರಿಂದ ರಚಿಸಲ್ಪಟ್ಟ ಬೀಜ ಸಮಿತಿಯು ಜಿಲ್ಲೆಯಲ್ಲಿ ಬಂದಿರುವ ಬೀಜ ಬೇಡಿಕೆ, ವಿತರಣೆ ಮತ್ತು ಫಲಾನುಭವಿಗಳ ಪಟ್ಟಿಯನ್ನು ಪರಿಶೀಲಿಸುವುದು. ಬಿತ್ತನೆ ಬೀಜ ಸಹಾಯಾನುದಾನವು ಕೇಂದ್ರ ಮಟ್ಟದಲ್ಲಿ ವಿತರಣೆಯಾಗಿದ್ದಲ್ಲಿ ವಿತರಣೆಯ ನಂತರ ಫಲಾನುಭವಿಗಳ ಪಟ್ಟಿಯನ್ನು ಐಚ್ಛಿಕವಾಗಿ ಪರಿಶೀಲಿಸಿ ಅನುಮೋದಿಸುವುದು.

–ಪ್ರಾತ್ಯಕ್ಷಿಕೆಗಳು, ರೈತ ತರಬೇತಿಗಳನ್ನು ಏರ್ಪಡಿಸುವುದು ಮತ್ತು ಮೌಲ್ಯಮಾಪನವನ್ನು ಕೈಗೊಳ್ಳುವಲ್ಲಿ ಕೃ.ವಿ.ವಿ.ಯ ವಲಯ ಸಂಶೋಧನಾ ಕೇಂದ್ರಗಳು, ಕೆ.ವಿ.ಕೆ.ಗಳು, ATMA, NGOಗಳು ಮತ್ತು ಸಹ ಇಲಾಖೆಗಳೂ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಕ್ರಮ ವಹಿಸುವುದು.

–ಜಿಲ್ಲಾ ಮಟ್ಟದ ಯೋಜನಾ ನಿರ್ವಹಣೆ ತಂಡವು ಸಂಶೋಧನಾ ಕೇಂದ್ರಗಳು ಮತ್ತು ಸಹ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಉದ್ದೇಶಿತ ಫಲಿತಾಂಶವನ್ನು ಪಡೆಯಲು ಸಹಕರಿಸುವುದು.

**2018–19 ನೇ ಸಾಲಿನಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ –ಎಣ್ಣೆಕಾಳು ಅಡಿಯಲ್ಲಿ ಅನುಸರಿಸಬೇಕಾದ ಪ್ರಮುಖ ಘಟಕಗಳ ಮಾರ್ಗಸೂಚಿಗಳು ಈ ಕೆಳಗಿನಂತಿರುತ್ತವೆ.**

**ಬಿತ್ತನೆ ಬೀಜ:**

- ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕೆಗಳನ್ನು ಗುಚ್ಛ ಪ್ರಾತ್ಯಕ್ಷಿಕೆಗಳಾಗಿ, ಪ್ರತಿ ಜಿಲ್ಲೆಯಲ್ಲಿ ಏರ್ಪಡಿಸುವಂತೆ ಯೋಜಿಸಲಾಗಿದ್ದು, ಪ್ರಾತ್ಯಕ್ಷಿಕೆಗಾಗಿ ಕೃಷಿ ಪರಿಕರಗಳೊಂದಿಗೆ ಸುಧಾರಿತ ತಳಿಗಳ ಬಿತ್ತನೆ ಬೀಜವನ್ನು ರೈತರಿಗೆ ಒದಗಿಸಲು ಅವಕಾಶ ಕಲ್ಪಿಸಲಾಗಿದೆ.
- ಹದಿನೈದು ವರ್ಷಗಳಿಂದೀಚೆಗೆ ಬಿಡುಗಡೆಯಾದ ತಳಿಗಳ ಬಿತ್ತನೆ ಬೀಜಗಳನ್ನು ಮಾತ್ರ ವಿತರಿಸಲು ಅವಕಾಶವಿರುತ್ತದೆ.

## 2018–19 ನೇ ಸಾಲಿನಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ –ಎಣ್ಣೆಕಾಳು ಯೋಜನೆ ಅಡಿಯಲ್ಲಿ ಅನುಸರಿಸಬೇಕಾದ ಘಟಕವಾರು ಮಾರ್ಗಸೂಚಿಗಳು

### I. ಬೀಜ ಘಟಕ

### 1. ತಳಿವರ್ಧಕ ಬಿತ್ತನೆ ಬೀಜ ಖರೀದಿ

ಕೇಂದ್ರ ಸರ್ಕಾರವು ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಗಳು, ಇತರೆ ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಗಳಿಂದ ಹಾಗೂ ಸಂಶೋಧನಾ ಕೇಂದ್ರಗಳಿಂದ ತಳಿವರ್ಧಕ ಬಿತ್ತನೆ ಬೀಜವನ್ನು ಖರೀದಿಸುವ ಬೀಜ ಸಂಸ್ಥೆಗಳಿಗೆ ಮತ್ತು ಇಲಾಖಾ ಬೀಜೋತ್ಪಾದನಾ ಕೇಂದ್ರಗಳಿಗೆ ಖರೀದಿಸಿದ ಬೀಜಕ್ಕೆ ಪೂರ್ತಿ ಹಣವನ್ನು ಮರು ಪಾವತಿ ಮಾಡಲು ಕೇಂದ್ರ ಸರ್ಕಾರವು ನೀಡಿರುವ ಆದೇಶದಂತೆ ನೀಡಲಾಗುವುದು. **ಸದರಿ ಘಟಕವನ್ನು ಕೇಂದ್ರ ಕಛೇರಿಯಿಂದ ಭರಿಸಲಾಗುವುದು.**

### 2. ಪ್ರಮಾಣಿತ ಬಿತ್ತನೆ ಬೀಜ ವಿತರಣಾ ಕಾರ್ಯಕ್ರಮ

ಪ್ರಮಾಣಿತ ಬಿತ್ತನೆ ಬೀಜದ ಬಳಕೆಯನ್ನು ಹೆಚ್ಚು ಪ್ರಚಾರ ಪಡಿಸುವ ಸಲುವಾಗಿ ರೈತರು ಖರೀದಿಸುವ ಪ್ರತಿ ಕ್ವಿಂಟಾಲ್ ಪ್ರಮಾಣಿತ ಬೀಜಕ್ಕೆ ಬೀಜದ ಶೇ.50ರಷ್ಟು ದರ ಅಥವಾ ಗರಿಷ್ಠ ರೂ.1800/– ಗಳ ಸಹಾಯ ಧನವನ್ನು(ನೆಲಗಡಲೆ ತಳಿಗೆ) ಮತ್ತು ಗರಿಷ್ಠ ರೂ.2000/– ಗಳ ಸಹಾಯ ಧನವನ್ನು (ಸೋಯಾಬೀನ್ ತಳಿಗೆ) ನೀಡಲಾಗುವುದು. ಹೈಬ್ರಿಡ್ ತಳಿಗಳಿಗೆ ಶೇ. 50ರಷ್ಟು ರಿಯಾಯಿತಿ ದರದಲ್ಲಿ ಪ್ರತಿ ಕ್ವಿಂಟಾಲ್‌ಗೆ ರೂ.8000/–ಕ್ಕೆ ಮೀರದಂತೆ ವಿತರಿಸುವುದು.(ಸದರಿ ಪ್ರಮಾಣಿತ ಭಿತ್ತನೆ ಬೀಜ ವಿತರಣೆಯನ್ನು ಬೀಜ ವಿಭಾಗದ ದರ ಕರಾರಿನ ಅನ್ವಯ ಅನುಷ್ಠಾನಗೊಳಿಸುವುದು)

ಪ್ರಮಾಣಿತ ಬಿತ್ತನೆ ಬೀಜ ವಿತರಿಸಲು ಉದ್ದೇಶಿಸಿರುವ ಬೀಜಗಳು ಕಡ್ಡಾಯವಾಗಿ 15 ವರ್ಷದೊಳಗೆ ಅಧಿಕೃತವಾಗಿ ಬಿಡುಗಡೆಯಾಗಿರುವ ತಳಿಗಳಾಗಿದ್ದು ಪ್ರಮಾಣೀಕರಣಗೊಂಡಿರಬೇಕು.

**ಧಾನ್ಯ ಸಂಗ್ರಹಣಾ ಕಣಜ**

ಶೇ.25 ರಷ್ಟು ದರ ಅಥವಾ ಗರಿಷ್ಠ ರೂ.750/– ಗಳ ಸಹಾಯ ಧನವನ್ನು 1–10 ಕ್ವಿಂ ಸಾಮರ್ಥ್ಯದ ಧಾನ್ಯ ಸಂಗ್ರಹಣಾ ಕಣಜಕ್ಕೆ ಯಾವುದು ಕಡಿಮೆಯೋ ಅದರಂತೆ ಸಹಾಯಧನ ನೀಡಲಾಗುವುದು. 2018–19ನೇ ಸಾಲಿನ ಕೇಂದ್ರ ಕಛೇರಿಯಿಂದ/ ಜಿಲ್ಲಾ ಕೃಷಿ ಉಪಕರಣ ಅನುಮೋದನೆಗೊಂಡಿರುವ ಸಂಸ್ಥೆಗಳಿಂದ/ವಿತರಕರಿಂದ ಖರೀದಿಸಿದ ಮಾದರಿಗಳು ಮಾತ್ರ ಸಹಾಯಧನ ಪಡೆಯಲು ಅರ್ಹವಾಗಿರುತ್ತವೆ. ಜಿಲ್ಲಾವಾರು ಆರ್ಥಿಕ ಮತ್ತು ಭೌತಿಕ ಗುರಿಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

## II ಪ್ರಾತ್ಯಕ್ಷಿಕೆಗಳು:

**ಸೂಚನೆ: ಪ್ರಾತ್ಯಕ್ಷಿಕೆಗಳಿಗೆ 15 ವರ್ಷಗಳ ಒಳಗಿನ ತಳಿ/ಸಂಕರಣಗಳನ್ನು ಬಳಸಬಹುದಾಗಿದೆ.**

- ಎಣ್ಣೆಕಾಳು ಬೆಳೆಗಳಲ್ಲಿ ನೂತನ/ಸುಧಾರಿತ ಬೇಸಾಯ ಕ್ರಮಗಳನ್ನು ಅಳವಡಿಸಿ ಏಕ ಬೆಳೆ ಮತ್ತು ಬೆಳೆ ಪದ್ಧತಿ ಆಧಾರಿತ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳುವುದು.
- ಶೇ. 30ರಷ್ಟು ಪ್ರಾತ್ಯಕ್ಷಿಕೆಗಳನ್ನು ಬೆಳೆ ಆಧಾರಿತ ಪದ್ಧತಿಗಳ ಮೇಲೆ ಆಯೋಜಿಸುವುದು. ಬೆಳೆ ಪದ್ಧತಿ ಪ್ರಾತ್ಯಕ್ಷಿಕೆಯಲ್ಲಿ ಬೆಳೆಗಳನ್ನು ಅನುಕ್ರಮವಾಗಿ ಅದೇ ತಾಕಿನಲ್ಲಿ ಬೆಳೆಯುವುದು.
- ಪ್ರತಿ ಬೆಳೆಯ ಪ್ರಾತ್ಯಕ್ಷಿಕೆಗಳನ್ನು ಕನಿಷ್ಠ 50 ಹೆಕ್ಟೇರ್ ಪ್ರದೇಶದಲ್ಲಿ ಕೈಗೊಳ್ಳುವುದು ಹಾಗೂ ಗುಚ್ಛ ಪ್ರಾತ್ಯಕ್ಷಿಕೆಯ (Cluster Demonstrations) ಪದ್ಧತಿಯಲ್ಲಿ ಏರ್ಪಡಿಸುವುದು.
- ಪ್ರಾತ್ಯಕ್ಷಿಕೆ ಆಯೋಜನೆಯಲ್ಲಿ ಗ್ರಾಮ ಪಂಚಾಯತಿಯ ಸಹಕಾರದೊಂದಿಗೆ ಫಲಾನುಭವಿ ರೈತರನ್ನು ಆಯ್ಕೆ ಮಾಡುವುದು.
- ಪ್ರಾತ್ಯಕ್ಷಿಕೆಯನ್ನು ಆಯೋಜಿಸುವಾಗ ಪ್ರಾತ್ಯಕ್ಷಿಕೆ ಪ್ರದೇಶವನ್ನು ಎರಡು ಭಾಗಗಳಾಗಿ ವಿಂಗಡಿಸಿ ಒಂದು ಭಾಗದಲ್ಲಿ ಸುಧಾರಿತ ತಾಂತ್ರಿಕತೆಗಳನ್ನು ಅಳವಡಿಸುವುದು; ಮತ್ತೊಂದು ಭಾಗದಲ್ಲಿ ರೈತರು ಅಳವಡಿಸುವ ಪದ್ಧತಿಗಳೊಂದಿಗೆ ಚೆಕ್ ಪ್ಲಾಟ್ ಆಗಿ ನಿರ್ವಹಿಸುವುದು. ಕಡಿಮೆ ಇಳುವರಿ ಪ್ರದೇಶಗಳಿಗೆ ಆದ್ಯತೆ ನೀಡುವುದು.
- ಒಂದು ಗುಚ್ಛ ಪ್ರದೇಶದಲ್ಲಿ ಒಳಪಡುವ ಎಲ್ಲಾ ರೈತರನ್ನು ಪ್ರಾತ್ಯಕ್ಷಿಕೆಯಲ್ಲಿ ತೊಡಗಿಸುವುದು. ಪ್ರತಿ ರೈತನ ಕನಿಷ್ಠ 1.0 ಹೆ. ಪ್ರದೇಶವನ್ನು ಗುಚ್ಛದಲ್ಲಿ ಸೇರ್ಪಡೆಗೊಳಿಸುವುದು.
- ಎಣ್ಣೆಕಾಳು ಬೆಳೆಗಳಲ್ಲಿ ಅಂತರ ಬೆಳೆ/ಸುಧಾರಿತ ತಳಿಗಳ/ಕೂರಿಗೆ ಬಿತ್ತನೆ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವುದು.
- ಬೆಳೆ ಪದ್ಧತಿಗಳ (ಎಣ್ಣೆಕಾಳು ಬೆಳೆ ಮುಖ್ಯ ಬೆಳೆಯಾಗಿ) ಬಗ್ಗೆ ಮತ್ತು ಅಂತರ ಬೆಳೆಯಾಗಿ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದು.
- ಸುಧಾರಿತ ತಾಂತ್ರಿಕತೆಗಳ ಬಗ್ಗೆ ಸ್ಥಳೀಯ ಸಂಶೋಧನಾ ಕೇಂದ್ರ/ ಕೃಷಿ ವಿಜ್ಞಾನ ಕೇಂದ್ರಗಳ ವಿಜ್ಞಾನಿಗಳೊಂದಿಗೆ ಸಮಾಲೋಚಿಸಿ ಅಂತಹ ತಾಂತ್ರಿಕತೆಗಳ ಕುರಿತು ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದು.
- ಪ್ರಾತ್ಯಕ್ಷಿಕೆಯ ವಿವರಣಾ ಫಲಕ (Display board) ದಲ್ಲಿ ರೈತರ ಸಂಖ್ಯೆ, ಹಳ್ಳಿಯ ಹೆಸರು, ತಳಿ ಮತ್ತು ಪ್ರಾತ್ಯಕ್ಷಿಕೆಯ ವಿವರ, ಬಳಸಲಾದ ಪೋಷಕಾಂಶಗಳು, ಬಿತ್ತನೆ ದಿನಾಂಕ, ಬಿತ್ತನೆ ಬೀಜ ಪ್ರಮಾಣ, ಬೆಳೆಯ ಅಂತರ, ಬಳಸಲಾದ ಪರಿಕರಗಳು ಇತ್ಯಾದಿಗಳ ಬಗ್ಗೆ ಮಾಹಿತಿ ನಮೂದಿಸುವುದು.
- ಜಿಲ್ಲೆಯ ಪ್ರಾತ್ಯಕ್ಷಿಕೆಯ ಸಮಗ್ರ ವರದಿಯನ್ನು ನಿಯತಕಾಲಿಕವಾಗಿ ನಿಗದಿತ ನಮೂನೆಯಲ್ಲಿ ಕೇಂದ್ರ ಕಛೇರಿಗೆ ಕಳುಹಿಸುವುದು.
- ಬೆಳೆಯು ಕಾಳು ತುಂಬುವ ಹಂತದಲ್ಲಿರುವಾಗ (Pod filling stage) ಕ್ಷೇತ್ರೋತ್ಸವವನ್ನು ಆಚರಿಸುವುದು

- ಪ್ರಾತ್ಯಕ್ಷಿಕೆ ತಾಕುಗಳು ಭೂ ಚೇತನ ಯೋಜನೆ ಮತ್ತು ಭೂ ಚೇತನ ಪ್ಲಸ್ ಯೋಜನೆಯಡಿ ವಿಲೀನವಾಗುವಂತೆ ಕಾರ್ಯಕ್ರಮ ರೂಪಿಸುವುದು.

- ಸದರಿ ಯೋಜನೆಯಡಿ ಕಾರ್ಯಕ್ರಮ ಹಮ್ಮಿಕೊಳ್ಳಲು ಆತ್ಮ ಸಿಬ್ಬಂದಿಯ ನೆರವನ್ನು ಪಡೆಯುವುದು.

**ಸೂಚನೆ:** NFSM-oilseeds ಪ್ರಾತ್ಯಕ್ಷಿಕೆಯ ವಿವರಗಳು (GPS co-ordinate ಸಹಿತ) ಹಾಗೂ ದಾಖಲಾತಿಗಳನ್ನೊಳಗೊಂಡ (ಛಾಯಾಚಿತ್ರಗಳು, ಕರಪತ್ರಗಳು ಇತ್ಯಾದಿ) ಪ್ರತ್ಯೇಕ ವಹಿಯನ್ನು – ಆಯಾ ರೈತ ಸಂಪರ್ಕ ಕೇಂದ್ರಗಳಲ್ಲಿ ನಿರ್ವಹಿಸುವುದು. NFSM-OS ಯೋಜನೆಯಡಿ ಜಿಲ್ಲೆಯಲ್ಲಿ ಕೈಗೊಳ್ಳಲಾಗುವ ಎಲ್ಲಾ ಪ್ರಾತ್ಯಕ್ಷಿಕೆಗಳ ವಿವರಗಳನ್ನು ಕ್ರೋಡೀಕರಿಸಿ ಮಾಹಿತಿಯು ಸಕಾಲದಲ್ಲಿ ಲಭ್ಯವಿರುವಂತೆ ಕ್ರಮ ವಹಿಸುವುದು.

### 3. ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕೆಗಳು

ಕೃಷಿ ವಿಶ್ವವಿದ್ಯಾಲಯವು ಹೊರತಂದಿರುವ ನೂತನ ತಾಂತ್ರಿಕತೆಯನ್ನು ಪ್ರಾತ್ಯಕ್ಷಿಕೆಗಳಲ್ಲಿ ಅಳವಡಿಸಿ ಎಣ್ಣೆಕಾಳು ಉತ್ಪಾದನೆಯನ್ನು ಹೆಚ್ಚಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿರುತ್ತದೆ. ನೆಲಗಡಲೆ, ಸೋಯಾಅವರೆ, ಸೂರ್ಯಕಾಂತಿ ಮತ್ತು ಕುಸುಬೆ ಬೆಳೆಗಳಿಗಾಗಿ 10 ಹೆ. ತಾಕನ್ನು ಒಂದೇ ಕಡೆ ಬರುವಂತೆ ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕೆಯನ್ನು ರೈತ ಜಮೀನುಗಳಲ್ಲಿ ಏರ್ಪಡಿಸಬೇಕಾಗಿರುತ್ತದೆ. ಈ ಪ್ರಾತ್ಯಕ್ಷಿಕೆಗಳಲ್ಲಿ ಖಾಸಗಿ/ಸಾರ್ವಜನಿಕ/ಸಂಕರಣ ತಳಿಗಳನ್ನು ಉಪಯೋಗಿಸಬೇಕಾಗಿರುತ್ತದೆ. ಈ ಪ್ರಾತ್ಯಕ್ಷಿಕೆಗಳಿಗೆ ಅಗತ್ಯವಾದ ಪರಿಕರಗಳನ್ನು ರೈತರಿಗೆ ಶೇ.50 ರಿಯಾಯತಿ ದರದಲ್ಲಿ ಆಯಾ ಬೆಳೆಗಳಿಗೆ ನಿಗದಿಪಡಿಸಿದ ಗರಿಷ್ಠ ಮೊತ್ತಕ್ಕೆ ಮೀರದಂತೆ ಒದಗಿಸಲಾಗುವುದು. ಕೃಷಿ ವಿಶ್ವವಿದ್ಯಾಲಯ/ ಕೃಷಿ ವಿಜ್ಞಾನ ಕೇಂದ್ರಗಳ ನೆರವನ್ನು ಈ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಲು ಪಡೆಯುವುದು. ನೀರಾವರಿ ಪ್ರದೇಶಗಳಲ್ಲಿ ಬೆಳೆ ಪರಿವರ್ತನೆಯಾಗಿ ಭತ್ತದ ಬೆಳೆಯ ಬದಲಾಗಿ ನೆಲಗಡಲೆ ಮತ್ತು ಸೂರ್ಯಕಾಂತಿ ಬೆಳೆಗಳನ್ನು ಬೆಳೆಯಲು ಹೆಚ್ಚಿನ ಒತ್ತನ್ನು ನೀಡುವುದು. ಪ್ರತಿ ಪ್ರಾತ್ಯಕ್ಷತೆಯ ಶೇಕಡಾ 10 ಭಾಗವನ್ನು ಪ್ರಾತ್ಯಕ್ಷತೆಯ ನಾಮಫಲಕಕ್ಕಾಗಿ ಉಪಯೋಗಿಸುವುದು. ಪ್ರಾತ್ಯಕ್ಷಿಕೆ ಕೈಗೊಂಡ ಕ್ಷೇತ್ರಗಳ GPS co-ordinate ದಾಖಲಿಸುವುದು ಹಾಗೂ ಪ್ರಾತ್ಯಕ್ಷಿಕೆ ಏರ್ಪಡಿಸಲು ಆತ್ಮ ಯೋಜನೆಯ ಸಿಬ್ಬಂದಿಯ ನೆರವನ್ನು ಪಡೆದುಕೊಳ್ಳುವುದು.

| ಕ್ರ ಸಂ. | ಬೆಳೆ | ಪರಿಕರಗಳು | ಶೇ.50 ರಿಯಾಯಿತಿ ಯಲ್ಲಿ ಗರಿಷ್ಠ ಮೊತ್ತ ಪ್ರತಿ ಹೆಕ್ಟೇರಿಗೆ |
|---|---|---|---|
| 1 | ನೆಲಗಡಲೆ | ಬಿತ್ತನೆಬೀಜ, ಸಾವಯವ ಗೊಬ್ಬರ (ಅಗ್ರಿಗೋಲ್ಡ್), ಕಾಂಪೋಸ್ಟ್, ಎರೆಹುಳು ಗೊಬ್ಬರ, ರೈಜೋಬಿಯಂ, ಪಿ.ಎಸ್.ಬಿ., ಟ್ರೈಕೋಡರ್ಮ(ದ್ರವ/ಪುಡಿ), ಜಿಪ್ಸಂ, ಸತುವಿನ ಸಲ್ಫೇಟ್, ಬೇವಿನ ಮೂಲದ ಪೀಡೆನಾಶಕಗಳು ಮತ್ತು ಸಸ್ಯ ಸಂರಕ್ಷಣಾ ಔಷಧಿ(ಅವಶ್ಯಕತೆಯಿದ್ದಲ್ಲಿ) | 10000/– |
| 2 | ಸೂರ್ಯಕಾಂತಿ | ಬಿತ್ತನೆ ಬೀಜ, ಸಾವಯವ ಗೊಬ್ಬರ, ಪಿ.ಎಸ್.ಬಿ., ಎನ್.ಪಿ.ವಿ., ಜಿಪ್ಸಂ, ಬೋರಾನ್/ ಸತುವಿನ ಸಲ್ಫೇಟ್, ಬೀಜೋಪಚಾರ ಔಷಧಿ, ಬೇವಿನ ಮೂಲದ ಪೀಡೆನಾಶಕಗಳು | 4000/– |
| 3 | ಸೋಯಾಅವರೆ | ಬಿತ್ತನೆ ಬೀಜ, ಸಾವಯವ ಗೊಬ್ಬರ, ರಸಗೊಬ್ಬರ, ರೈಜೋಬಿಯಂ, ಪಿ.ಎಸ್.ಬಿ., ಟ್ರೈಕೋಡರ್ಮ (ದ್ರವ/ಪುಡಿ), ಸತುವಿನ ಸಲ್ಫೇಟ್, ಜಿಪ್ಸಂ, ಬೇವು ಮೂಲದ ಕೀಟನಾಶಕ, ಮತ್ತು ಸಸ್ಯ ಸಂರಕ್ಷಣಾ ಔಷಧಿ(ಅವಶ್ಯಕತೆ ಇದ್ದಲ್ಲಿ ಮಾತ್ರ), ಬೀಜೋಪಚಾರ ಔಷಧಿ | 6000/– |

ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವಾಗ ನಿಗದಿಪಡಿಸಿದ ಪರಿಕರಗಳನ್ನು ಸ್ಥಳೀಯ ಅವಶ್ಯಕತೆಗಳಿಗನುಗುಣವಾಗಿ ವಿತರಿಸುವುದು ಹಾಗೂ ಪ್ರತಿ ಹೆಕ್ಟೇರಿಗೆ ನಿಗದಿಪಡಿಸಿದ ಗರಿಷ್ಠ ಮೊತ್ತ ಮೀರದಂತೆ ಕಾರ್ಯಕ್ರಮ ಅನುಷ್ಠಾನಗೊಳಿಸುವುದು.

ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕೆಗಳಿಗಾಗಿ ಒದಗಿಸಬೇಕಾದ ಪರಿಕರಗಳು

ನೆಲಗಡಲೆ ಪ್ರಾತ್ಯಕ್ಷಿಕೆ : (ಶೇ.50ರ ರಿಯಾಯಿತಿ ದರದಲ್ಲಿ ಪರಿಕರ ವಿತರಣೆ ಗರಿಷ್ಠ ಮೊತ್ತ ಪ್ರತಿ ಹೆಕ್ಟೇರಿಗೆ ರೂ.10000/-)

| ಕ್ರ. ಸಂ. | ಪರಿಕರಗಳು | ಸಹಾಯಧನದ ಮೊತ್ತ |
|---|---|---|
| 1. | ಬಿತ್ತನೆ ಬೀಜ | 5975.00 |
| 2. | ಬೀಜೋಪಚಾರ ಔಷಧಿ | 200.00 |
| 3. | ಜೀವಾಣು/ಜೈವಿಕ ಗೊಬ್ಬರ | 200.00 |
| 4. | ಲಘು ಪೋಷಕಾಂಶ/ಸಿಟಿ ಕಾಂಫೋಸ್ಟ್/ಎರೆಹುಳು ಗೊಬ್ಬರ | 1000.00 |
| 5. | ಸಸ್ಯ ಸಂರಕ್ಷಣಾ ಔಷಧಿ | 1325.00 |
| 6. | ವಿಜ್ಞಾನಿಗಳ ಭೇಟಿ | 300.00 |
| 7. | ಪ್ರಚಾರ/ಕ್ಷೇತ್ರೋತ್ಸವ/ನಾಮಫಲಕ/ಮುದ್ರಿತ ಮಸ್ತಕ ಸಾಮಗ್ರಿ | 1000.00 |
| | ಒಟ್ಟು | **10000.00** |

ಸೋಯಾಅವರೆ ಪ್ರಾತ್ಯಕ್ಷಿಕೆ :(ಶೇ.50ರ ರಿಯಾಯಿತಿ ದರದಲ್ಲಿ ಪರಿಕರ ವಿತರಣೆ ಗರಿಷ್ಠ ಮೊತ್ತ ಪ್ರತಿ ಹೆಕ್ಟೇರಿಗೆ ರೂ.6000/-)

| ಕ್ರ. ಸಂ. | ಪರಿಕರಗಳು | ಸಹಾಯಧನದ ಮೊತ್ತ |
|---|---|---|
| 1 | ಬಿತ್ತನೆ ಬೀಜ | 3715.00 |
| 2 | ಬೀಜೋಪಚಾರ ಔಷಧಿ | 100.00 |
| 3 | ಜೀವಾಣು/ಜೈವಿಕ ಗೊಬ್ಬರ | 200.00 |
| 4 | ಲಘು ಪೋಷಕಾಂಶ | 200.00 |
| 5 | ಸಿಟಿ ಕಾಂಫೋಸ್ಟ್/ಎರೆಹುಳು ಗೊಬ್ಬರ | 200.00 |
| 6 | ಸಾವಯವ ಗೊಬ್ಬರ | 200.00 |
| 7 | ಸಸ್ಯ ಸಂರಕ್ಷಣಾ ಔಷಧಿ | 400.00 |
| 8 | ವಿಜ್ಞಾನಿಗಳ ಭೇಟಿ | 250.00 |
| 9 | ಪ್ರಚಾರ/ಕ್ಷೇತ್ರೋತ್ಸವ/ನಾಮಫಲಕ/ಮುದ್ರಿತ ಮಸ್ತಕ ಸಾಮಗ್ರಿ | 735.00 |
| | ಒಟ್ಟು | **6000.00** |

ಸೂರ್ಯಕಾಂತಿ ಪ್ರಾತ್ಯಕ್ಷಿಕೆ : (ಶೇ.50ರ ರಿಯಾಯಿತಿ ದರದಲ್ಲಿ ಪರಿಕರ ವಿತರಣೆ ಗರಿಷ್ಠ ಮೊತ್ತ ಪ್ರತಿ ಹೆಕ್ಟೇರಿಗೆ ರೂ.4000/-)

| ಕ್ರ. ಸಂ. | ಪರಿಕರಗಳು | ಸಹಾಯಧನದ ಮೊತ್ತ |
|---|---|---|
| 1. | ಬಿತ್ತನೆ ಬೀಜ | 1280.00 |
| 2. | ಬೀಜೋಪಚಾರ ಔಷಧಿ | 200.00 |
| 3. | ಜೀವಾಣು/ಜೈವಿಕ ಗೊಬ್ಬರ | 200.00 |
| 4. | ಲಘು ಪೋಷಕಾಂಶ | 200.00 |
| 5. | ಸಿಟಿ ಕಾಂಫೋಸ್ಟ್/ಎರೆಹುಳು ಗೊಬ್ಬರ | 300.00 |
| 6. | ಸಾವಯವ ಗೊಬ್ಬರ | 300.00 |
| 7. | ಸಸ್ಯ ಸಂರಕ್ಷಣಾ ಔಷಧಿ | 500.00 |
| 8. | ವಿಜ್ಞಾನಿಗಳ ಭೇಟಿ | 320.00 |
| 9. | ಪ್ರಚಾರ/ಕ್ಷೇತ್ರೋತ್ಸವ/ನಾಮಫಲಕ/ಮುದ್ರಿತ ಮಸ್ತಕ ಸಾಮಗ್ರಿ | 700.00 |
| | ಒಟ್ಟು | **4000.00** |

ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಲು ಈ ಕೆಳಕಂಡ ಪರಿಕರಗಳನ್ನು ಶೇ.50ರ ರಿಯಾಯಿತಿಯಲ್ಲಿ ತಪ್ಪದೇ ಸರಬರಾಜು ಮಾಡುವುದು. ಬಿತ್ತನೆ ಬೀಜ, ಬೀಜೋಪಚಾರ ಔಷದಿ, ಸಾವಯವಗೊಬ್ಬರ(ಅಗ್ರಿಗೋಲ್ಡ್, ಸಂಪದ್ಭರಿತ ಕಾಂಪೋಸ್ಟ್, ವರ್ಮಿ ಕಾಂಪೋಸ್ಟ್), ಕಳೆನಾಶಕ, ಟ್ರೈಕೋಡರ್ಮ, ಪಿಎಸ್‌ಬಿ, ರೈಜೋಬಿಯಂ, ಲಘು ಪೋಷಕಾಂಶಗಳು, ಪೀಡೆನಾಶಕ ಔಷಧಿಗಳು, ಎನ್.ಪಿ.ವಿ./ಬಿಟಿ, ಜಿಪ್ಸಂ, ಲಿಂಗಾಕರ್ಷಕ ಬಲೆಗಳು ಮತ್ತು ಲ್ಯೂರ್ಸ್.ಸದರಿ ಪ್ರಾತ್ಯಕ್ಷಿಕೆಗಳ ಪರಿಕರ ವಿತರಣೆಯ ಸಹಾಯಧನದ ಮೊತ್ತವು ಬದಲಾವಣೆಗೆ ಅವಶ್ಯವಿದ್ದಲ್ಲಿ ಪ್ರತಿ ಹೆಕ್ಟೇರಿಗೆ ನಿಗದಿಪಡಿಸಿದ ಗರಿಷ್ಠ ಮೊತ್ತ ಮೀರದಂತೆ ಜಿಲ್ಲೆಯ ಅಗತ್ಯಕ್ಕೆ ಅನುಗುಣವಾಗಿ ಆಯಾ ಜಿಲ್ಲೆಗಳವರೇ ನಿರ್ಧರಿಸುವುದು.

## II. ಬೀಜೇತರ ಘಟಕಗಳು (ಉತ್ಪಾದನಾ ಪರಿಕರಗಳು)

### 4. ಜಿಪ್ಸಂ – ಪೈರೇಟ್ಸ್/ಲೈಮಿಂಗ್/ಡೋಲೊಮೈಟ್/ಸಿಂಗಲ್ ಸೂಪರ್ ಫಾಸ್ಫೇಟ್ ವಿತರಣೆ

ಈ ಕಾರ್ಯಕ್ರಮದ ಮೂಲಕ ಎಣ್ಣೆಕಾಳು ಬೆಳೆಗಳಲ್ಲಿ ಅದರಲ್ಲೂ ಮುಖ್ಯವಾಗಿ ನೆಲಗಡಲೆ ಬೆಳೆಗೆ ಜಿಪ್ಸಂ ಲವಣವನ್ನು ಸರಬರಾಜು ಮಾಡಲಾಗುವುದು. ಜಿಪ್ಸಂ ಸರಬರಾಜಿನಲ್ಲಿ ಸಾಗಾಣಿಕೆ ವೆಚ್ಚವು ಅತಿ ಹೆಚ್ಚಾಗಿರುವುದರಿಂದ ಸಾಗಾಣಿಕೆ ವೆಚ್ಚದ ಭಾರವನ್ನು ರೈತರಿಗೆ ಕಡಿಮೆ ಮಾಡಲು ಈ ಪರಿಕರದ ಶೇ.50ರಷ್ಟು ಬೆಲೆ (ಸಾಗಾಣಿಕೆ ವೆಚ್ಚವೂ ಸೇರಿ) ಪ್ರತಿ ಹೆಕ್ಟೇರಿಗೆ ಗರಿಷ್ಠ ರೂ.750/–ಗಳ ಸಹಾಯಧನವನ್ನು ಒದಗಿಸಲಾಗುವುದು. ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವಾಗ 10ಹೆ ವಿಸ್ತೀರ್ಣ ಸಾಧ್ಯವಾದ ಮಟ್ಟಿಗೆ ಒಂದೇ ತಾಕಿನಲ್ಲಿ ಬರುವಂತೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು.

### 5. ರೈಜೋಬಿಯಂ ಜೀವಾಣು ಹಾಗೂ ಪಿ.ಎಸ್.ಬಿ.ಸರಬರಾಜು

ನೆಲಗಡಲೆ ಹಾಗೂ ಸೋಯಾಅವರೆಗಳ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ರೈಜೋಬಿಯಂ ಹಾಗೂ ಎಣ್ಣೆಕಾಳು ಬೆಳೆಗಳಿಗೆ ಪಿ.ಎಸ್.ಬಿ. ಜೀವಾಣುಗಳು ಅಗ್ಗದ ಪರಿಕರವಾಗಿರುತ್ತದೆ. ರೈಜೋಬಿಯಂ ವಾತಾವರಣದಲ್ಲಿರುವ ಸಾರಜನಕವನ್ನು ಹಾಗೂ ಪಿ.ಎಸ್.ಬಿ. ಜೀವಾಣು ಭೂಮಿಯಲ್ಲಿರುವ ರಂಜಕವನ್ನು ಕರಗದ ಸ್ಥಿತಿಯಿಂದ ಕರಗುವ ಸ್ಥಿತಿಗೆ ತರಲು ಸಹಾಯಮಾಡುತ್ತವೆ. ಇದರಿಂದ ಇಳುವರಿಯೂ ಸಹ ಹೆಚ್ಚುತ್ತದೆ. ಈ ಜೀವಾಣುಗಳಿಗೆ ಶೇ.50ರ ಬೆಲೆಯ ಅಥವಾ ಹೆಕ್ಟೇರ್ ಒಂದಕ್ಕೆ ಗರಿಷ್ಠ 300/– ರೂ.ಗಳ ಸಹಾಯಧನವನ್ನು ನೀಡಿ ವಿತರಿಸುವುದು.

### 6. ರಾಸಾಯನಿಕ ಪೀಡೆನಾಶಕ / ಲಘುಪೋಷಕಾಂಶಗಳ ಸರಬರಾಜು.

ರಾಸಾಯನಿಕ ಪೀಡೆನಾಶಕ/ಶಿಲೀಂದ್ರನಾಶಕ/ಬಯೋ(ಜೈವಿಕ)ಪೆಸ್ಟಿಸೈಡ್/ಬಯೋಏಜೆಂಟ್ಸ್/ಕಳೆನಾಶಕ/ಲಘುಪೋಷಕಾಂಶಗಳ ಸರಬರಾಜು ಔಷಧಿಗಳನ್ನು ಸರಬರಾಜು ಮಾಡಲು ಶೇ.50 ಸಹಾಯಧನದಲ್ಲಿ ಹೆ.ಗೆ ಗರಿಷ್ಠ ರೂ.500/–ಗಳನ್ನು ಮೀರದಂತೆ ಸಹಾಯಧನವನ್ನು ಕಲ್ಪಿಸಲಾಗಿದೆ.

### 7. ಸಸ್ಯ ಸಂರಕ್ಷಣಾ ಸಿಂಪರಣಾ ಉಪಕರಣಗಳ ಸರಬರಾಜು

ಎಲ್ಲಾ ಎಣ್ಣೆಕಾಳು ಬೆಳೆಗಳಿಗೆ ಕೀಟ/ರೋಗಬಾಧೆಯ ರಕ್ಷಣೆಗಾಗಿ ಸಕಾಲದಲ್ಲಿ ಸಿಂಪರಣಾ ಕಾರ್ಯಕ್ರಮ ತೆಗೆದುಕೊಳ್ಳಲು ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ.

**ಎ. ಕೈಚಾಲಿತ ಉಪಕರಣ:** ರೈತರಿಗೆ ಪ್ರತಿ ಕೈಚಾಲಿತ ಉಪಕರಣದ ಶೇ.40ರ ದರ ಅಥವಾ ಗರಿಷ್ಠ ರೂ.600/–ಗಳು, ಯಾವುದು ಕಡಿಮೆಯೋ ಅದರಂತೆ ಸಹಾಯಧನ ನೀಡಲಾಗುವುದು (ಸಣ್ಣ ಮತ್ತು ಅತಿಸಣ್ಣ, ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ ಹಾಗೂ ರೈತ ಮಹಿಳೆಯರಿಗೆ ಹೆಚ್ಚುವರಿಯಾಗಿ ಶೇ.10 ಸಹಾಯಧನ ಅಥವಾ ಗರಿಷ್ಟ ರೂ.800/– ಗಳು).

**ಬಿ. ಶಕ್ತಿಚಾಲಿತ ಉಪಕರಣ:** a) ರೈತರಿಗೆ ಪ್ರತಿ ನ್ಯಾಪ್ಸ್ಯಾಕ್ & ತೈವಾನ್ ಶಕ್ತಿ ಚಾಲಿತ (16 ಲೀಟರ್ ಸಾಮರ್ಥ್ಯಕ್ಕಿಂತ ಕಡಿಮೆ) ಉಪಕರಣದ ಶೇ.50ರ ದರ ಅಥವಾ ಗರಿಷ್ಟ ರೂ.3000/–ಗಳು, ಯಾವುದು ಕಡಿಮೆಯೋ ಅದರಂತೆ

ಸಹಾಯಧನ ನೀಡಲಾಗುವುದು (ಸಣ್ಣ ಮತ್ತು ಅತಿ ಸಣ್ಣ, ಪರಿಶಿಷ್ಠ ಜಾತಿ, ಪರಿಶಿಷ್ಟ ಪಂಗಡ ಹಾಗೂ ರೈತ ಮಹಿಳೆಯರಿಗೆ ಹೆಚ್ಚುವರಿಯಾಗಿ ಶೇ.10 ಸಹಾಯಧನ ಗರಿಷ್ಟ ರೂ.3800/–ಗಳು).

b) ಪ್ರತಿ ನ್ಯಾಪ್ಸ್ಯಾಕ್ & ತೈವಾನ್ ಶಕ್ತಿಚಾಲಿತ ಉಪಕರಣದ (16 ಲೀಟರ್ ಸಾಮರ್ಥ್ಯಕ್ಕಿಂತ ಹೆಚ್ಚು) ಶೇ.40ರ ದರ ಅಥವಾ ಗರಿಷ್ಟ ರೂ.8000/– ಗಳು, ಯಾವುದು ಕಡಿಮೆಯೋ ಅದರಂತೆ ಸಹಾಯಧನ ನೀಡಲಾಗುವುದು. (ಸಣ್ಣ ಮತ್ತು ಅತಿಸಣ್ಣ, ಪರಿಶಿಷ್ಠ ಜಾತಿ, ಪರಿಶಿಷ್ಟ ಪಂಗಡ ಹಾಗೂ ರೈತ ಮಹಿಳೆಯರಿಗೆ ಹೆಚ್ಚುವರಿಯಾಗಿ ಶೇ.10 ಸಹಾಯಧನ ಗರಿಷ್ಟ ರೂ.10000/– ಗಳು).

**8. ಸುಧಾರಿಸಿದ ಕೃಷಿ ಉಪಕರಣಗಳ ಸರಬರಾಜು**

ಭೂಮಿ ಸಿದ್ಧಗೊಳಿಸುವಿಕೆ, ಬೀಜಗಳ ಬಿತ್ತನೆ, ರಸಗೊಬ್ಬರಗಳನ್ನು ಹಾಕುವುದು, ಒಕ್ಕಣೆ, ಮಧ್ಯಂತರ ಬೇಸಾಯ, ಮುಂತಾದ ಸಾಗುವಳಿ ಕ್ರಮಗಳಲ್ಲಿ ಸುಧಾರಿತ ಕೃಷಿ ಉಪಕರಣಗಳ ಬಳಕೆಯನ್ನು ಪ್ರೋತ್ಸಾಹಿಸುವುದಕ್ಕಾಗಿ ಈ ಕಾರ್ಯಕ್ರಮದ ಮೂಲಕ ರಿಯಾಯಿತಿ ದರದಲ್ಲಿ ಸುಧಾರಿತ ಕೃಷಿ ಉಪಕರಣ ಯಂತ್ರಗಳನ್ನು ರೈತರಿಗೆ ವಿತರಿಸಲಾಗುವುದು.

**ಎ. ಮಾನವ/ಎತ್ತುಚಾಲಿತ ಉಪಕರಣ:** ಪ್ರತಿ ಉಪಕರಣದ ಒಟ್ಟು ಬೆಲೆಯ ಶೇ.40ರಷ್ಟು ಅಥವಾ ಗರಿಷ್ಟ ರೂ.8000/– ಗಳು ರೈತರಿಗೆ ನೀಡುವುದು. (ಸಣ್ಣ ಮತ್ತು ಅತಿಸಣ್ಣ, ಪರಿಶಿಷ್ಠ ಜಾತಿ, ಪರಿಶಿಷ್ಟ ಪಂಗಡ ಹಾಗೂ ರೈತ ಮಹಿಳೆಯರಿಗೆ ಹೆಚ್ಚುವರಿಯಾಗಿ ಶೇ.10 ಸಹಾಯಧನ ಗರಿಷ್ಟ ರೂ.10000/–ಗಳು).

**ಬಿ. ಯಂತ್ರಚಾಲಿತ ಕೃಷಿ ಉಪಕರಣ:** ಪ್ರತಿ ಉಪಕರಣದ (ರೋಟೋವೇಟರ್/ಸೀಡ್ ಡ್ರಿಲ್/ಬಹು ಬೆಳೆ ಒಕ್ಕಣೆ ಯಂತ್ರ/ನೆಲಗಡಲೆ ಡಿಗ್ಗರ್/ನೆಲಗಡಲೆ ಪಾಡ್‌ಸ್ಟ್ರಿಪ್ಪರ್) – ಒಟ್ಟು ಬೆಲೆಯ ಶೇ.40ರಷ್ಟು ಅಥವಾ ಗರಿಷ್ಟ ರೂ.50000/– ಗಳು ರೈತರಿಗೆ ನೀಡುವುದು.(ಸಣ್ಣ ಮತ್ತು ಅತಿಸಣ್ಣ, ಪರಿಶಿಷ್ಠ ಜಾತಿ, ಪರಿಶಿಷ್ಟ ಪಂಗಡ ಹಾಗೂ ರೈತ ಮಹಿಳೆಯರಿಗೆ ಹೆಚ್ಚುವರಿಯಾಗಿ ಶೇ.10 ಸಹಾಯಧನ ಗರಿಷ್ಟ ರೂ.63000/–ಗಳು).

**ಕೃಷಿ ಯಂತ್ರೋಪಕರಣಗಳು ಹಾಗೂ ಸಸ್ಯ ಸಂರಕ್ಷಣಾ ಉಪಕರಣಗಳ ಫಲಾನುಭವಿಗಳನ್ನು** ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ –ಎಣ್ಣೆಕಾಳು **ಯೋಜನೆಯಡಿ ಆಯ್ಕೆ ಮಾಡುವಲ್ಲಿ ಅನುಸರಿಸಿರುವ ಮಾನದಂಡಗಳು**

ರೈತರನ್ನು ಆಯ್ಕೆ ಮಾಡುವಲ್ಲಿ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸುವುದು.

1. 2018–19ನೇ ಸಾಲಿನ ಕೇಂದ್ರ ಕಛೇರಿಯಿಂದ ಅನುಮೋದನೆಗೊಂಡಿರುವ ಸಂಸ್ಥೆಗಳಿಂದ/ವಿತರಕರಿಂದ ಖರೀದಿಸಿದ ಮಾದರಿಗಳು ಮಾತ್ರ ಸಹಾಯಧನ ಪಡೆಯಲು ಅರ್ಹವಾಗಿರುತ್ತವೆ.
2. ಪ್ರತಿ ಮಾದರಿಗೆ ನಿಗದಿ ಪಡಿಸಿದ ಗರಿಷ್ಟ ಸಹಾಯಧನ ಅಥವಾ ಘಟಕದ ಗರಿಷ್ಠ ಧರದ ಶೇ. 50ರಷ್ಟು ಸಹಾಯಧನವನ್ನು ನೀಡುವುದು
3. ರೈತರು ಸಹಾಯಧನದಡಿ ಸವಲತ್ತನ್ನು ಪಡೆಯಲು ನಿಗದಿತ ನಮೂನೆಯಲ್ಲಿ ಸಂಬಂಧಿಸಿದ ದಾಖಲೆಗಳೊಂದಿಗೆ (ಪಹಣಿ/ಹಿಡುವಳಿ ಪತ್ರ, ಜಾತಿ ಪ್ರಮಾಣ ಪತ್ರ) ರೈತ ಸಂಪರ್ಕಕೇಂದ್ರದ ಮುಖ್ಯಸ್ಥರಿಗೆ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸಿದ ಎಲ್ಲಾ ರೈತರಿಗೆ ಸ್ವೀಕೃತಿ ಪತ್ರ ನೀಡುವುದು.
4. ರೈತ ಸಂಪರ್ಕ ಕೇಂದ್ರದಲ್ಲಿ ಸ್ವೀಕೃತವಾದ ಎಲ್ಲಾ ಅರ್ಜಿಗಳ ವಿವರಗಳನ್ನು ಜೇಷ್ಠತೆಯಲ್ಲಿ ಪ್ರತ್ಯೇಕ ವಹಿಯಲ್ಲಿ ದಾಖಲಿಸುವುದು
5. ರೈತರು ರೈತ ಸಂಪರ್ಕ ಕೇಂದ್ರಕ್ಕೆ ಸಲ್ಲಿಸಿದ ಅರ್ಜಿಗಳನ್ನು ಪರಿಶೀಲಿಸಿ ನಂತರ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಸಲ್ಲಿಸುವುದು.
6. ಸಹಾಯಕ ಕೃಷಿ ನಿರ್ದೇಶಕರು, ರೈತರು ಇಚ್ಚಿಸಿದ ಉಪಕರಣ ಪಡೆಯಲು (ಇಲಾಖೆಯಲ್ಲಿ ಅನುಮೋದಿಸಿರುವ ಪಟ್ಟಿಯಲ್ಲಿರುವಂತೆ). ನಿಗದಿ ಪಡಿಸಿರುವ ಕಾರ್ಯಕ್ರಮದ ಅನ್ವಯ ಹಾಗೂ ಅನುದಾನದ ಲಭ್ಯತೆ ಮತ್ತು ಜೇಷ್ಠತೆ ಆಧಾರದ ಮೇರೆಗೆ ಅರ್ಹ ಫಲಾನುಭವಿಯನ್ನು ಆಯ್ಕೆ ಮಾಡುವುದು.

**9. ತುಂತುರು ನೀರಾವರಿ**

ಸದರಿ ಘಟಕವನ್ನು PMKSY ಮಾರ್ಗಸೂಚಿಯಂತೆ(ಕೇಂದ್ರ ಸರ್ಕಾರದ) ಅನುಷ್ಠಾನಗೊಳಿಸುವುದು. ತುಂತುರು ನೀರಾವರಿ ಘಟಕದಡಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಕೇಂದ್ರ ಮತ್ತು ರಾಜ್ಯ ವಲಯ ಯೋಜನೆಗಳ ಅನುದಾನವನ್ನು ಸಮನ್ವಯಗೊಳಿಸಬಹುದಾಗಿದೆ.

**10. ನೀರು ದೊರೆಯುವ ಸ್ಥಳದಿಂದ ಕ್ಷೇತ್ರಕ್ಕೆ ನೀರು ಹರಿಸುವ ಪೈಪುಗಳನ್ನು ಒದಗಿಸುವುದುಃ**

ನೀರು ದೊರೆಯುವ ಸ್ಥಳದಿಂದ ಕ್ಷೇತ್ರಕ್ಕೆ ನೀರನ್ನು ಕೊಂಡೊಯ್ಯಲು ಶೇಕಡ 50 ರಿಯಾಯಿತಿ ದರದಲ್ಲಿ, ರೂ.35/- ಪ್ರತಿ ಮೀಟರ್‌ಗೆ ಮೀರದಂತೆ (PVC) ರೂ.50/- ಪ್ರತಿ ಮೀಟರ್‌ಗೆ ಮೀರದಂತೆ (HDPE) ಹಾಗೂ ಒಬ್ಬ ಫಲಾನುಭವಿಗೆ ಗರಿಷ್ಟ 600 ಮೀಟರ್‌ಗಳ ಪೈಪುಗಳನ್ನು ರೈತರ ಬೇಡಿಕೆಗೆ ಅನುಗುಣವಾಗಿ ಒದಗಿಸುವುದು. ಪ್ರತಿ ರೈತರಿಗೆ ಗರಿಷ್ಠ ರೂ.15000/- ಗಳಿಗೆ ಮೀರದಂತೆ ವಿತರಿಸುವುದು.

**ಸೂಚನೆ:**

- ಕೇಂದ್ರ ಸರ್ಕಾರದ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ –ಎಣ್ಣೆಕಾಳು ಕಾರ್ಯಕಾರಿ ಮಾರ್ಗಸೂಚಿ. ಅನ್ವಯ ಎಣ್ಣೆಕಾಳು ಯೋಜನೆಯಡಿ ಬೀಜೇತರ ಘಟಕದಿಂದ ಬೀಜೇತರ ಘಟಕಗಳಿಗೆ ಶೇ. 20 ರಂತೆ ಮಾತ್ರ ಅಂತರಘಟಕ ಬದಲಾವಣೆಗೆ ಅನುಮೋದನೆ ನೀಡಲು ಅವಕಾಶವಿರುತ್ತದೆ. ಅಂತರ ಘಟಕ ಬದಲಾವಣೆ ಪ್ರಸ್ತಾವನೆಗೆ ಕೇಂದ್ರ ಕಚೇರಿಯಿಂದ ಪೂರ್ವಾನುಮತಿ ಪಡೆದು ಅನುಷ್ಠಾನಗೊಳಿಸುವುದು.
- ಪ್ರಾತ್ಯಕ್ಷಿಕೆಗಳಲ್ಲಿ ಒಂದು ಬೆಳೆಯಿಂದ ಬೇರೆ ಬೆಳೆಗೆ ಅಂತರಘಟಕ ಬದಲಾವಣೆಗೆ ಅವಕಾಶವಿದ್ದು, ಕೇಂದ್ರ ಕಚೇರಿಯಿಂದ ಪೂರ್ವಾನುಮತಿ ಪಡೆದು ಅನುಷ್ಠಾನಗೊಳಿಸುವುದು.
- ಪ್ರಾತ್ಯಕ್ಷಿಕೆ ಮತ್ತು ಪ್ರಗತಿ ವರದಿಯ ನಮೂನೆಯನ್ನು ಲಗತ್ತಿಸಿದ್ದು, ಸದರಿ ನಮೂನೆಯಲ್ಲಿ ವರದಿ ಸಲ್ಲಿಸುವುದು.

**ಕೃಷಿ ನಿರ್ದೇಶಕರು**

## ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ –ಎಣ್ಣೆಕಾಳು ಕಾರ್ಯಕ್ರಮದ ಪ್ರಗತಿ ವರದಿಯ ನಮೂನೆ (2018–19)

| | ವಿವರಗಳು | ಮಾಪನ | ಭೌತಿಕ | | ಆರ್ಥಿಕ | |
|---|---|---|---|---|---|---|
| | | | ಗುರಿ | ಸಾಧನೆ | ಗುರಿ | ಸಾಧನೆ |
| I | **ಬೀಜ ಘಟಕಗಳು** | | | | | |
| 1. | ತಳಿವರ್ಧಕ ಬೀಜ ಖರೀದಿ | ಕ್ವಿಂ. | | | | |
| 2 | ಪ್ರಮಾಣಿತ ಬೀಜ ವಿತರಣೆ | ಕ್ವಿಂ. | | | | |
| | ಧಾನ್ಯ ಸಂಗ್ರಹಣಾ ಕಣಜ | | | | | |
| II | **ತಾಂತ್ರಿಕತೆ ವರ್ಗಾವಣೆ ಕಾರ್ಯಕ್ರಮಗಳು** | | | | | |
| 3. | ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕೆ | ಹೆ. | | | | |
| | ನೆಲಗಡಲೆ | | | | | |
| | ಸೂರ್ಯಕಾಂತಿ | | | | | |
| | ಸೋಯಾಬೀನ್ | | | | | |
| III | **ಬೀಜೇತರ ಘಟಕಗಳು** | | | | | |
| 4 | ಜಿಪ್ಸಂ/ಪೈರೆಟ್ಸ್ ವಿತರಣೆ | ಹೆ. | | | | |
| 5 | ರೈಜೋಬಿಯಂ/ಪಿ.ಎಸ್.ಬಿ ವಿತರಣೆ | ಹೆ. | | | | |
| 6 | ಸಸ್ಯ ಸಂರಕ್ಷಣಾ ಔಷಧಿಗಳು | ಹೆ. | | | | |
| 7 | ಲಘು ಪೋಷಕಾಂಶ ವಿತರಣೆ | ಹೆ. | | | | |
| 8 | ಸಸ್ಯ ಸಂರಕ್ಷಣಾ ಉಪಕರಣ ವಿತರಣೆ(ಕೈ ಚಾಲಿತ) | ಸಂ. | | | | |
| | ಸಸ್ಯ ಸಂರಕ್ಷಣಾ ಉಪಕರಣ ವಿತರಣೆ(ಶಕ್ತಿ ಚಾಲಿತ) | ಸಂ. | | | | |
| 9 | ಕೃಷಿ ಉಪಕರಣ ವಿತರಣೆ (ಕೈ ಚಾಲಿತ) | ಸಂ. | | | | |
| | ಕೃಷಿ ಉಪಕರಣ ವಿತರಣೆ(ಶಕ್ತಿ ಚಾಲಿತ) | ಸಂ. | | | | |
| 10 | ತುಂತುರು ನೀರಾವರಿ | ಹೆ. | | | | |
| 11. | ನೀರು ಒದಗಿಸುವ ಪೈಪು | ಮೀ | | | | |
| IV | ನಿರ್ವಹಣಾ ವೆಚ್ಚ | | | | | |
| | **ಒಟ್ಟು** | | | | | |

2018–19ನೇ ಸಾಲಿನ ಎನ್.ಎಫ್.ಎಸ್.ಎಂ ಎಣ್ಣೆಕಾಳು ಬೆಳೆಗಳ ಜಿಲ್ಲಾವಾರು ಕಾರ್ಯಕ್ರಮ (ಲಕ್ಷ ರೂ.ಗಳಲ್ಲಿ)

ಲೆಕ್ಕ ಶೀರ್ಷಿಕೆ:2401-00-114-0-01 (ರಾಜ್ಯವಲಯ)

| ಕ್ರ. ಸಂ | ಜಿಲ್ಲೆಗಳು | ತಳಿವರ್ಧಕ ಬೀಜ ಖರೀದಿ(ಕ್ವಿಂ.) | | ಪ್ರಮಾಣಿತ ಬೀಜ ವಿತರಣೆ(ಕ್ವಿಂ.) | | ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕೆ | | | | | |
|---|---|---|---|---|---|---|---|---|---|---|---|
| | | | | | | ನೆಲಗಡಲೆ ರೂ.10000/ಹೆ | | ಸೂರ್ಯಕಾಂತಿ–ರೂ 4000/–ಹೆ | | ಸೋಯಾಬೀನ್–ರೂ 6000/–ಹೆ | |
| | | ಗುರಿ | | ಗುರಿ | | ಗುರಿ | | ಗುರಿ | | ಗುರಿ | |
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 1 | ಬಾಗಲಕೋಟೆ | 0 | 0.00 | 200 | 5.00 | 400 | 40.00 | 370 | 14.80 | 0 | 0.00 |
| 2 | ಬೆಂಗಳೂರು(ನ) | 0 | 0.00 | 0 | 2.00 | 0 | 0.00 | 0 | 0.00 | 0 | 0.00 |
| 3 | ಬೆಂಗಳೂರು(ಗ್ರಾ) | 0 | 0.00 | 0 | 2.00 | 0 | 0.00 | 0 | 0.00 | 0 | 0.00 |
| 4 | ಬೆಳಗಾವಿ | 0 | 0.00 | 0 | 0.00 | 350 | 35.00 | 0 | 0.00 | 400 | 24.00 |
| 5 | ಬಳ್ಳಾರಿ | 0 | 0.00 | 0 | 0.00 | 150 | 15.00 | 0 | 0.00 | 0 | 0.00 |
| 6 | ಬೀದರ್ | 0 | 0.00 | 200 | 5.00 | 0 | 0.00 | 0 | 0.00 | 615 | 36.90 |
| 7 | ಬಿಜಾಪುರ | 0 | 0.00 | 0 | 0.00 | 250 | 25.00 | 150 | 6.00 | 0 | 0.00 |
| 8 | ಚಾಮರಾಜನಗರ | 0 | 0.00 | 80 | 2.00 | 50 | 5.00 | 0 | 0.00 | 0 | 0.00 |
| 9 | ಚಿಕ್ಕಬಳ್ಳಾಪುರ | 0 | 0.00 | 320 | 8.00 | 60 | 6.00 | 0 | 0.00 | 0 | 0.00 |
| 10 | ಚಿಕ್ಕಮಗಳೂರು | 0 | 0.00 | 0 | 0.00 | 60 | 6.00 | 0 | 0.00 | 0 | 0.00 |
| 11 | ಚಿತ್ರದುರ್ಗ | 0 | 0.00 | 80 | 2.00 | 420 | 42.00 | 0 | 0.00 | 0 | 0.00 |
| 12 | ದಾವಣಗೆರೆ | 0 | 0.00 | 0 | 0.00 | 220 | 22.00 | 0 | 0.00 | 0 | 0.00 |
| 13 | ಧಾರವಾಡ | 0 | 0.00 | 80 | 2.00 | 160 | 16.00 | 0 | 0.00 | 100 | 6.00 |
| 14 | ಗದಗ | 0 | 0.00 | 80 | 2.00 | 150 | 15.00 | 240 | 9.60 | 0 | 0.00 |
| 15 | ಗುಲ್ಬರ್ಗಾ | 0 | 0.00 | 0 | 0.00 | 160 | 16.00 | 0 | 0.00 | 0 | 0.00 |
| 16 | ಹಾಸನ | 0 | 0.00 | 0 | 0.00 | 30 | 3.00 | 0 | 0.00 | 0 | 0.00 |
| 17 | ಹಾವೇರಿ | 0 | 0.00 | 0 | 0.00 | 150 | 15.00 | 0 | 0.00 | 51 | 3.06 |
| 18 | ಕೋಲಾರ | 0 | 0.00 | 200 | 5.00 | 50 | 5.00 | 0 | 0.00 | 0 | 0.00 |
| 19 | ಕೊಪ್ಪಳ | 0 | 0.00 | 200 | 5.00 | 200 | 20.00 | 240 | 9.60 | 0 | 0.00 |
| 20 | ಮಂಡ್ಯ | 0 | 0.00 | 0 | 0.00 | 10 | 1.00 | 0 | 0.00 | 0 | 0.00 |
| 21 | ಮೈಸೂರು | 0 | 0.00 | 0 | 0.00 | 50 | 5.00 | 0 | 0.00 | 0 | 0.00 |
| 22 | ರಾಯಚೂರು | 0 | 0.00 | 0 | 0.00 | 150 | 15.00 | 0 | 0.00 | 0 | 0.00 |
| 23 | ರಾಮನಗರ | 0 | 0.00 | 0 | 0.00 | 10 | 1.00 | 0 | 0.00 | 0 | 0.00 |
| 24 | ಶಿವಮೊಗ್ಗ | 0 | 0.00 | 0 | 0.00 | 100 | 10.00 | 0 | 0.00 | 0 | 0.00 |
| 25 | ತುಮಕೂರು | 0 | 0.00 | 160 | 4.00 | 520 | 52.00 | 0 | 0.00 | 0 | 0.00 |
| 26 | ಉತ್ತರ ಕನ್ನಡ | 0 | 0.00 | 120 | 3.00 | 20 | 2.00 | 0 | 0.00 | 0 | 0.00 |
| 27 | ಉಡುಪಿ | 0 | 0.00 | 120 | 3.00 | 20 | 2.00 | 0 | 0.00 | 0 | 0.00 |
| 28 | ಯಾದಗಿರಿ | 0 | 0.00 | 0 | 0.00 | 127 | 12.70 | 0 | 0.00 | 0 | 0.00 |
| 30 | ಕೇಂದ್ರ ಕಛೇರಿ | 1666 | 250.00 | 0 | 0.00 | 0 | 0.00 | 0 | 0.00 | 0 | 0.00 |
| | **ಒಟ್ಟು** | **1666** | **250.00** | **1840** | **50.00** | **3867** | **386.70** | 1000 | 40.00 | 1166 | 69.96 |

2018-19ನೇ ಸಾಲಿನ ಎನ್.ಎಫ

ಲೆಕ್ಕ ಶೀರ್ಷಿಕೆ:2401-00-114-(

| ಕ್ರ. ಸಂ | ಜಿಲ್ಲೆಗಳು | ಒಟ್ಟು ಪ್ರಾತ್ಯಕ್ಷಿಕೆ | | ನಿರ್ವಹಣಾ ವೆಚ್ಚ | ಸ.ಸಂ.ಔಷಧಿ | | ಒಟ್ಟು ಗುರಿ | | ಎಸ್.ಸಿ.ಪಿ | | ಟಿ.ಎಸ್.ಪಿ | | ಸಾಮಾನ್ಯ | |
|---|---|---|---|---|---|---|---|---|---|---|---|---|---|---|
| | | ಗುರಿ | | ಗುರಿ | ಗುರಿ | | ಗುರಿ | | ಗುರಿ | | ಗುರಿ | | ಗುರಿ | |
| | | ಬೌತಿಕ | ಆರ್ಥಿಕ | ಆರ್ಥಿಕ | ಬೌತಿಕ | ಆರ್ಥಿಕ | ಬೌತಿಕ | ಆರ್ಥಿಕ | ಬೌತಿಕ | ಆರ್ಥಿಕ | ಬೌತಿಕ | ಆರ್ಥಿಕ | ಬೌತಿಕ | ಆರ್ಥಿಕ |
| 1 | ಬಾಗಲಕೋಟೆ | 770 | 54.8 | 1.00 | 1772 | 8.86 | 2742 | 69.66 | 470 | 11.95 | 191 | 4.84 | 2081 | 52.87 |
| 2 | ಬೆಂಗಳೂರು(ನ) | 0 | 0.0 | 1.00 | 500 | 2.50 | 500 | 5.50 | 86 | 0.94 | 35 | 0.38 | 380 | 4.17 |
| 3 | ಬೆಂಗಳೂರು(ಗ್ರಾ) | 0 | 0.0 | 1.00 | 500 | 2.50 | 500 | 5.50 | 86 | 0.94 | 35 | 0.38 | 380 | 4.17 |
| 4 | ಬೆಳಗಾವಿ | 750 | 59.0 | 1.00 | 1650 | 8.25 | 2400 | 68.25 | 412 | 11.70 | 167 | 4.74 | 1822 | 51.80 |
| 5 | ಬಳ್ಳಾರಿ | 150 | 15.0 | 1.00 | 800 | 4.00 | 950 | 20.00 | 163 | 3.43 | 66 | 1.39 | 721 | 15.18 |
| 6 | ಬೀದರ್ | 615 | 36.9 | 1.00 | 1400 | 7.00 | 2215 | 49.90 | 380 | 8.56 | 154 | 3.47 | 1681 | 37.87 |
| 7 | ಬಿಜಾಪುರ | 400 | 31.0 | 1.00 | 1300 | 6.50 | 1700 | 38.50 | 292 | 6.60 | 118 | 2.68 | 1290 | 29.22 |
| 8 | ಚಾಮರಾಜನಗರ | 50 | 5.0 | 1.00 | 600 | 3.00 | 730 | 11.00 | 125 | 1.89 | 51 | 0.76 | 554 | 8.35 |
| 9 | ಚಿಕ್ಕಬಳ್ಳಾಪುರ | 60 | 6.0 | 1.00 | 800 | 4.00 | 1180 | 19.00 | 202 | 3.26 | 82 | 1.32 | 896 | 14.42 |
| 10 | ಚಿಕ್ಕಮಗಳೂರು | 60 | 6.0 | 1.00 | 300 | 1.50 | 360 | 8.50 | 62 | 1.46 | 25 | 0.59 | 273 | 6.45 |
| 11 | ಚಿತ್ರದುರ್ಗ | 420 | 42.0 | 1.00 | 1500 | 7.50 | 2000 | 52.50 | 343 | 9.00 | 139 | 3.65 | 1518 | 39.85 |
| 12 | ದಾವಣಗೆರೆ | 220 | 22.0 | 1.00 | 900 | 4.50 | 1120 | 27.50 | 192 | 4.72 | 78 | 1.91 | 850 | 20.87 |
| 13 | ಧಾರವಾಡ | 260 | 22.0 | 1.00 | 1000 | 5.00 | 1340 | 30.00 | 230 | 5.15 | 93 | 2.09 | 1017 | 22.77 |
| 14 | ಗದಗ | 390 | 24.6 | 1.00 | 1000 | 5.00 | 1470 | 32.60 | 252 | 5.59 | 102 | 2.27 | 1116 | 24.74 |
| 15 | ಗುಲ್ಬರ್ಗಾ | 160 | 16.0 | 1.00 | 1000 | 5.00 | 1160 | 22.00 | 199 | 3.77 | 81 | 1.53 | 880 | 16.70 |
| 16 | ಹಾಸನ | 30 | 3.0 | 1.00 | 900 | 4.50 | 930 | 8.50 | 159 | 1.46 | 65 | 0.59 | 706 | 6.45 |
| 17 | ಹಾವೇರಿ | 201 | 18.1 | 1.00 | 800 | 4.00 | 1001 | 23.06 | 172 | 3.95 | 70 | 1.60 | 760 | 17.50 |
| 18 | ಕೋಲಾರ | 50 | 5.0 | 1.00 | 500 | 2.50 | 750 | 13.50 | 129 | 2.32 | 52 | 0.94 | 569 | 10.25 |
| 19 | ಕೊಪ್ಪಳ | 440 | 29.6 | 1.00 | 800 | 4.00 | 1440 | 39.60 | 247 | 6.79 | 100 | 2.75 | 1093 | 30.06 |
| 20 | ಮಂಡ್ಯ | 10 | 1.0 | 1.00 | 700 | 3.50 | 710 | 5.50 | 122 | 0.94 | 49 | 0.38 | 539 | 4.17 |
| 21 | ಮೈಸೂರು | 50 | 5.0 | 1.00 | 800 | 4.00 | 850 | 10.00 | 146 | 1.72 | 59 | 0.70 | 645 | 7.59 |
| 22 | ರಾಯಚೂರು | 150 | 15.0 | 1.00 | 1600 | 8.00 | 1750 | 24.00 | 300 | 4.12 | 122 | 1.67 | 1328 | 18.22 |
| 23 | ರಾಮನಗರ | 10 | 1.0 | 1.00 | 400 | 2.00 | 410 | 4.00 | 70 | 0.69 | 28 | 0.28 | 311 | 3.04 |
| 24 | ಶಿವಮೊಗ್ಗ | 100 | 10.0 | 1.00 | 500 | 2.50 | 600 | 13.50 | 103 | 2.32 | 42 | 0.94 | 455 | 10.25 |
| 25 | ತುಮಕೂರು | 520 | 52.0 | 1.00 | 2000 | 10.00 | 2680 | 67.00 | 460 | 11.49 | 186 | 4.66 | 2034 | 50.85 |
| 26 | ಉತ್ತರ ಕನ್ನಡ | 20 | 2.0 | 0.50 | 500 | 2.50 | 640 | 8.00 | 110 | 1.37 | 44 | 0.56 | 486 | 6.07 |
| 27 | ಉಡುಪಿ | 20 | 2.0 | 0.50 | 500 | 2.50 | 640 | 8.00 | 110 | 1.37 | 44 | 0.56 | 486 | 6.07 |
| 28 | ಯಾದಗಿರಿ | 127 | 12.7 | 0.50 | 1580 | 7.90 | 1707 | 21.10 | 293 | 3.62 | 119 | 1.47 | 1296 | 16.01 |
| 30 | ಕೇಂದ್ರ ಕಛೇರಿ | 0 | 0.0 | 23.50 | 0 | 0.00 | 1666 | 273.50 | 286 | 46.91 | 116 | 19.01 | 1264 | 207.59 |
| | ಒಟ್ಟು | 6033 | 496.7 | **50.00** | **26602** | **133.01** | 36141 | 979.67 | **6198** | **168.01** | **2512** | **68.09** | **27431** | **743.57** |

2018-19ನೇ ಸಾಲಿನ ಎನ್.ಎಫ್.ಎಸ್.ಎಂ ಎಣ್ಣೆಕಾಳು ಬೆಳೆಗಳ ಜಿಲ್ಲಾವಾರು ಕಾರ್ಯಕ್ರಮ (ಲಕ್ಷ ರೂ.ಗಳಲ್ಲಿ)-ಜಿಲ್ಲಾ ವಲಯ

ಲೆಕ್ಕ ಶೀರ್ಷಿಕೆ 2435-00-101-0-03

| ಕ್ರ. ಸಂ | ಜಿಲ್ಲೆಗಳು | ಜಿಪ್ಸಂ ವಿತರಣೆ (ಹೆ.) ಪ್ರತಿ ಹೆಕ್ಟೇರ್ ಗೆ ರೂ. 750/-. | | ರೈಜೋಬಿಯಂ/ ಪಿ.ಎಸ್.ಬಿ ವಿತರಣೆ (ಹೆ.) ಪ್ರತಿ ಹೆಕ್ಟೇರ್ ಗೆ ರೂ. 300/-. ಅಥವಾ ದರದ ಶೇ 50 ರಷ್ಟು ಸಹಾಯಧನ, ಯಾವುದು ಕಡಿಮೆಯೋ ಅದರಂತೆ) | | ಸಸ್ಯ ಸಂರಕ್ಷಣಾ ಔಷಧಿಗಳ ವಿತರಣೆ (ಹೆ.) ಪ್ರತಿ ಹೆಕ್ಟೇರ್ ಗೆ ರೂ. 500/-. ಅಥವಾ ದರದ ಶೇ 50 ರಷ್ಟು ಸಹಾಯಧನ, ಯಾವುದು ಕಡಿಮೆಯೋ ಅದರಂತೆ) | | ಲಘು ಪೋಷಕಾಂಶ ವಿತರಣೆ (ಹೆ.) ಪ್ರತಿ ಹೆಕ್ಟೇರ್ ಗೆ ರೂ. 500/-. ಅಥವಾ ದರದ ಶೇ 50 ರಷ್ಟು ಸಹಾಯಧನ, ಯಾವುದು ಕಡಿಮೆಯೋ ಅದರಂತೆ) | | ಸಸ್ಯ ಸಂರಕ್ಷಣಾ ಉಪಕರಣಗಳು (ಸಂ)(ಕೈಚಾಲಿತ) | | ಸಸ್ಯ ಸಂರಕ್ಷಣಾ ಉಪಕರಣಗಳು (ಸಂ)(ಶಕ್ತಿ ಚಾಲಿತ) | | ಕೃಷಿ ಉಪಕರಣಗಳ ವಿತರಣೆ (ಸಂ.)(ಕೈ ಚಾಲಿತ | |
|---|---|---|---|---|---|---|---|---|---|---|---|---|---|---|---|
| | | ಗುರಿ | | ಗುರಿ | | ಗುರಿ | | ಗುರಿ | | ಗುರಿ | | ಗುರಿ | | ಗುರಿ | |
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 1 | ಬಾಗಲಕೋಟೆ | 700 | 5.25 | 870 | 2.61 | 1020 | 5.10 | 1029 | 5.15 | 800 | 6.40 | 60 | 6.00 | 300 | 24.00 |
| 2 | ಬೆಂಗಳೂರು(ನ) | 50 | 0.38 | 13 | 0.04 | 0 | 0.00 | 50 | 0.25 | 80 | 0.64 | 20 | 2.00 | 5 | 0.40 |
| 3 | ಬೆಂಗಳೂರು(ಗ್ರಾ) | 50 | 0.38 | 25 | 0.08 | 0 | 0.00 | 50 | 0.25 | 80 | 0.64 | 20 | 2.00 | 5 | 0.40 |
| 4 | ಬೆಳಗಾವಿ | 390 | 2.93 | 700 | 2.10 | 800 | 4.00 | 200 | 1.00 | 400 | 3.20 | 40 | 4.00 | 250 | 20.00 |
| 5 | ಬಳ್ಳಾರಿ | 350 | 2.63 | 160 | 0.48 | 0 | 0.00 | 100 | 0.50 | 240 | 1.92 | 50 | 5.00 | 100 | 8.00 |
| 6 | ಬೀದರ್ | 300 | 2.25 | 350 | 1.05 | 800 | 4.00 | 1000 | 5.00 | 500 | 4.00 | 40 | 4.00 | 50 | 4.00 |
| 7 | ಬಿಜಾಪುರ | 500 | 3.75 | 400 | 1.20 | 1000 | 5.00 | 200 | 1.00 | 600 | 4.80 | 80 | 8.00 | 10 | 0.80 |
| 8 | ಚಾಮರಾಜನಗರ | 200 | 1.50 | 100 | 0.30 | 0 | 0.00 | 100 | 0.50 | 500 | 4.00 | 50 | 5.00 | 100 | 8.00 |
| 9 | ಚಿಕ್ಕಬಳ್ಳಾಪುರ | 200 | 1.50 | 33 | 0.10 | 100 | 0.50 | 100 | 0.50 | 500 | 4.00 | 50 | 5.00 | 50 | 4.00 |
| 10 | ಚಿಕ್ಕಮಗಳೂರು | 200 | 1.50 | 300 | 0.90 | 0 | 0.00 | 100 | 0.50 | 300 | 2.40 | 10 | 1.00 | 50 | 4.00 |
| 11 | ಚಿತ್ರದುರ್ಗ | 700 | 5.25 | 1000 | 3.00 | 1000 | 5.00 | 100 | 0.50 | 400 | 3.20 | 50 | 5.00 | 50 | 4.00 |
| 12 | ದಾವಣಗೆರೆ | 200 | 1.50 | 200 | 0.60 | 0 | 0.00 | 100 | 0.50 | 500 | 4.00 | 50 | 5.00 | 350 | 28.00 |
| 13 | ಧಾರವಾಡ | 500 | 3.75 | 100 | 0.30 | 478 | 2.39 | 100 | 0.50 | 600 | 4.80 | 30 | 3.00 | 100 | 8.00 |
| 14 | ಗದಗ | 500 | 3.75 | 700 | 2.10 | 0 | 0.00 | 200 | 1.00 | 500 | 4.00 | 30 | 3.00 | 50 | 4.00 |
| 15 | ಗುಲ್ಬರ್ಗಾ | 200 | 1.50 | 2000 | 6.00 | 0 | 0.00 | 500 | 2.50 | 500 | 4.00 | 20 | 2.00 | 80 | 6.40 |
| 16 | ಹಾಸನ | 100 | 0.75 | 70 | 0.21 | 0 | 0.00 | 100 | 0.50 | 300 | 2.40 | 20 | 2.00 | 50 | 4.00 |
| 17 | ಹಾವೇರಿ | 100 | 0.75 | 120 | 0.36 | 0 | 0.00 | 200 | 1.00 | 300 | 2.40 | 20 | 2.00 | 50 | 4.00 |
| 18 | ಕೋಲಾರ | 100 | 0.75 | 120 | 0.36 | 0 | 0.00 | 100 | 0.50 | 300 | 2.40 | 20 | 2.00 | 50 | 4.00 |
| 19 | ಕೊಪ್ಪಳ | 100 | 0.75 | 500 | 1.50 | 0 | 0.00 | 200 | 1.00 | 400 | 3.20 | 20 | 2.00 | 50 | 4.00 |
| 20 | ಮಂಡ್ಯ | 100 | 0.75 | 20 | 0.06 | 0 | 0.00 | 75 | 0.38 | 200 | 1.60 | 20 | 2.00 | 20 | 1.60 |
| 21 | ಮೈಸೂರು | 100 | 0.75 | 80 | 0.24 | 0 | 0.00 | 200 | 1.00 | 300 | 2.40 | 5 | 0.50 | 50 | 4.00 |
| 22 | ರಾಯಚೂರು | 956 | 7.17 | 600 | 1.80 | 700 | 3.50 | 200 | 1.00 | 450 | 3.60 | 10 | 1.00 | 120 | 9.60 |
| 23 | ರಾಮನಗರ | 100 | 0.75 | 20 | 0.06 | 0 | 0.00 | 0 | 0.00 | 100 | 0.80 | 20 | 2.00 | 10 | 0.80 |
| 24 | ಶಿವಮೊಗ್ಗ | 0 | 0.00 | 20 | 0.06 | 1000 | 5.00 | 0 | 0.00 | 100 | 0.80 | 5 | 0.50 | 10 | 0.80 |
| 25 | ತುಮಕೂರು | 610 | 4.58 | 800 | 2.40 | 500 | 2.50 | 265 | 1.33 | 500 | 4.00 | 30 | 3.00 | 300 | 24.00 |
| 26 | ಉತ್ತರ ಕನ್ನಡ | 0 | 0.00 | 50 | 0.15 | 0 | 0.00 | 50 | 0.25 | 100 | 0.80 | 20 | 2.00 | 20 | 1.60 |
| 27 | ಉಡುಪಿ | 0 | 0.00 | 50 | 0.15 | 0 | 0.00 | 50 | 0.25 | 100 | 0.80 | 5 | 0.50 | 20 | 1.60 |
| 28 | ಯಾದಗಿರಿ | 694 | 5.21 | 600 | 1.80 | 0 | 0.00 | 630 | 3.15 | 350 | 2.80 | 5 | 0.50 | 100 | 8.00 |
| | **ಒಟ್ಟು** | **8000** | **60.00** | **10001** | **30.00** | **7398** | **36.99** | **5999** | **30.00** | 10000 | 80.00 | 800 | 80.00 | 2400 | 192.00 |

2018-19ನೇ ಸಾಲಿ:

ಲೆಕ್ಕ ಶೀರ್ಷಿಕೆ 2435

| ಕ್ರ. ಸಂ | ಜಿಲ್ಲೆಗಳು | ಕೃಷಿ ಉಪಕರಣಗಳ ವಿತರಣೆ (ಸಂ.)ಶಕ್ತಿ ಚಾಲಿತ | | ನೀರು ಒದಗಿಸುವ ಪೈಪು | | ತುಂತುರು ನೀರಾವರಿ(ಕೇಂದ್ರ ಸರ್ಕಾರದ ಪಿ.ಎಮ್.ಕೆ.ಎಸ್.ವೈ | | ಬೀಜ ಸಂಗ್ರಹಣಾ ಬಿನ್(Seed storage bin) | | ಒಟ್ಟು ಗುರಿ | | ಎಸ್.ಸಿ.ಪಿ | | ಟಿ.ಎಸ್.ಪಿ | | ಸಾಮಾನ್ಯ | |
|---|---|---|---|---|---|---|---|---|---|---|---|---|---|---|---|---|---|
| | | ಗುರಿ | | ಗುರಿ | | ಗುರಿ | | ಗುರಿ | | ಗುರಿ | | ಗುರಿ | | ಗುರಿ | | ಗುರಿ | |
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 1 | ಬಾಗಲಕೋಟೆ | 15 | 7.50 | 20000 | 7.00 | 42 | 4.20 | 300 | 2.25 | 25136 | 75.46 | **4311** | **12.94** | 1747 | 5.24 | 19078 | 57.27 |
| 2 | ಬೆಂಗಳೂರು(ನ) | 0 | 0.00 | 200 | 0.07 | 6 | 0.60 | 20 | 0.15 | 444 | 4.52 | **76** | **0.78** | 31 | 0.31 | 337 | 3.43 |
| 3 | ಬೆಂಗಳೂರು(ಗ್ರಾ) | 1 | 0.50 | 200 | 0.07 | 6 | 0.60 | 20 | 0.15 | 457 | 5.06 | **78** | **0.87** | 32 | 0.35 | 347 | 3.84 |
| 4 | ಬೆಳಗಾವಿ | 5 | 2.50 | 500 | 0.18 | 30 | 3.00 | 200 | 1.50 | 3515 | 44.40 | **603** | **7.61** | 244 | 3.09 | 2668 | 33.70 |
| 5 | ಬಳ್ಳಾರಿ | 2 | 1.00 | 15000 | 5.25 | 20 | 2.00 | 100 | 0.75 | 16122 | 27.53 | **2765** | **4.72** | 1120 | 1.91 | 12237 | 20.89 |
| 6 | ಬೀದರ್ | 2 | 1.00 | 10000 | 3.50 | 30 | 3.00 | 200 | 1.50 | 13272 | 33.30 | **2276** | **5.71** | 922 | 2.31 | 10073 | 25.27 |
| 7 | ಬಿಜಾಪುರ | 10 | 5.00 | 10000 | 3.50 | 28 | 2.80 | 100 | 0.75 | 12928 | 36.60 | **2217** | **6.28** | 898 | 2.54 | 9812 | 27.78 |
| 8 | ಚಾಮರಾಜನಗರ | 1 | 0.50 | 15000 | 5.25 | 20 | 2.00 | 100 | 0.75 | 16171 | 27.80 | **2773** | **4.77** | 1124 | 1.93 | 12274 | 21.10 |
| 9 | ಚಿಕ್ಕಬಳ್ಳಾಪುರ | 1 | 0.50 | 1000 | 0.35 | 10 | 1.00 | 100 | 0.75 | 2144 | 18.20 | **368** | **3.12** | 149 | 1.26 | 1627 | 13.81 |
| 10 | ಚಿಕ್ಕಮಗಳೂರು | 1 | 0.50 | 2000 | 0.70 | 8 | 0.80 | 100 | 0.75 | 3069 | 13.05 | **526** | **2.24** | 213 | 0.91 | 2329 | 9.90 |
| 11 | ಚಿತ್ರದುರ್ಗ | 15 | 7.50 | 15000 | 5.25 | 38 | 3.80 | 200 | 1.50 | 18553 | 44.00 | **3182** | **7.55** | 1289 | 3.06 | 14082 | 33.40 |
| 12 | ದಾವಣಗೆರೆ | 2 | 1.00 | 800 | 0.28 | 4 | 0.40 | 100 | 0.75 | 2306 | 42.03 | **395** | **7.21** | 160 | 2.92 | 1750 | 31.90 |
| 13 | ಧಾರವಾಡ | 2 | 1.00 | 400 | 0.14 | 4 | 0.40 | 150 | 1.13 | 2464 | 25.41 | **423** | **4.36** | 171 | 1.77 | 1870 | 19.28 |
| 14 | ಗದಗ | 2 | 1.00 | 5000 | 1.75 | 25 | 2.50 | 200 | 1.50 | 7207 | 24.60 | **1236** | **4.22** | 501 | 1.71 | 5470 | 18.67 |
| 15 | ಗುಲ್ಬರ್ಗಾ | 2 | 1.00 | 5000 | 1.75 | 25 | 2.50 | 200 | 1.50 | 8527 | 29.15 | **1462** | **5.00** | 593 | 2.03 | 6472 | 22.12 |
| 16 | ಹಾಸನ | 2 | 1.00 | 2000 | 0.70 | 4 | 0.40 | 200 | 1.50 | 2846 | 13.46 | **488** | **2.31** | 198 | 0.94 | 2160 | 10.22 |
| 17 | ಹಾವೇರಿ | 2 | 1.00 | 2000 | 0.70 | 20 | 2.00 | 200 | 1.50 | 3012 | 15.71 | **517** | **2.69** | 209 | 1.09 | 2286 | 11.92 |
| 18 | ಕೋಲಾರ | 2 | 1.00 | 2000 | 0.70 | 15 | 1.50 | 150 | 1.13 | 2857 | 14.34 | **490** | **2.46** | 199 | 1.00 | 2168 | 10.88 |
| 19 | ಕೊಪ್ಪಳ | 2 | 1.00 | 2000 | 0.70 | 15 | 1.50 | 100 | 0.75 | 3387 | 16.40 | **581** | **2.81** | 235 | 1.14 | 2571 | 12.45 |
| 20 | ಮಂಡ್ಯ | 2 | 1.00 | 1000 | 0.35 | 6 | 0.60 | 50 | 0.38 | 1493 | 8.71 | **256** | **1.49** | 104 | 0.61 | 1133 | 6.61 |
| 21 | ಮೈಸೂರು | 1 | 0.50 | 500 | 0.18 | 20 | 2.00 | 50 | 0.38 | 1306 | 11.94 | **224** | **2.05** | 91 | 0.83 | 991 | 9.06 |
| 22 | ರಾಯಚೂರು | 10 | 5.00 | 10750 | 3.76 | 30 | 3.00 | 200 | 1.50 | 14026 | 40.93 | **2405** | **7.02** | 975 | 2.84 | 10646 | 31.07 |
| 23 | ರಾಮನಗರ | 0 | 0.00 | 1000 | 0.35 | 5 | 0.50 | 50 | 0.38 | 1305 | 5.64 | **224** | **0.97** | 91 | 0.39 | 990 | 4.28 |
| 24 | ಶಿವಮೊಗ್ಗ | 0 | 0.00 | 500 | 0.18 | 0 | 0.00 | 100 | 0.75 | 1735 | 8.09 | **298** | **1.39** | 121 | 0.56 | 1317 | 6.14 |
| 25 | ತುಮಕೂರು | 15 | 7.50 | 15000 | 5.25 | 40 | 4.00 | 200 | 1.50 | 18260 | 60.05 | **3132** | **10.30** | 1269 | 4.17 | 13859 | 45.58 |
| 26 | ಉತ್ತರ ಕನ್ನಡ | 1 | 0.50 | 500 | 0.18 | 8 | 0.80 | 100 | 0.75 | 849 | 7.03 | **146** | **1.20** | 59 | 0.49 | 644 | 5.33 |
| 27 | ಉಡುಪಿ | 0 | 0.00 | 500 | 0.18 | 8 | 0.80 | 100 | 0.75 | 833 | 5.03 | **143** | **0.86** | 58 | 0.35 | 632 | 3.81 |
| 28 | ಯಾದಗಿರಿ | 2 | 1.00 | 5007 | 1.75 | 33 | 3.30 | 143 | 1.07 | 7564 | 28.58 | **1297** | **4.90** | 526 | 1.99 | 5741 | 21.69 |
| | ಒಟ್ಟು | 100 | **50.00** | **142857** | **50.00** | **500** | **50.00** | **3733** | **28.00** | 191788 | 686.99 | **32892** | **117.82** | **13329** | **47.75** | 145567 | 521.42 |